**Shikshan Sanshodhan : Journal of Arts, Humanities and Social Sciences** ISSN(o): 2581-6241
Monthly, Peer-Reviewed, Refereed, Indexed Journal Impact Factor: 9.134
Volume - 8, Issue - 10, October - 2025

DOIs:10.2018/SS/202510009 --:-- Research Paper / Article / Review

# ಭದ್ರಾಚಲ ರಾಮದಾಸರು ಮತ್ತು ಪುರಂದರದಾಸರು – ಸಂಕೀರ್ಣ ರಚನೆಗಳ ವಿಶ್ಲೇಷಣೆ

**Pareekshith B Vashishta**
Independent Researcher, Mysuru, India
Email – spsvallabha@gmail.com

**ಅಮೂರ್ತ:** *ಭಾರತೀಯ ಭಕ್ತಿ ಪಂಥದ ಪ್ರಮುಖರಲ್ಲಿ ಪುರಂದರದಾಸರು ಮತ್ತು ಭದ್ರಾಚಲ ರಾಮದಾಸರಿಬ್ಬರೂ ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ. ತಮ್ಮ ರಚನೆಗಳ ಮೂಲಕ ಜನರನ್ನು ಸರಿದಾರಿಗೆ ತರುವಲ್ಲಿ ಇಬ್ಬರೂ ಶ್ಲಾಘನೀಯ ಪ್ರಯತ್ನವನ್ನು ಮಾಡಿದ್ದಾರೆ. ದಾಸವರೇಣ್ಯ ಪುರಂದರದಾಸರು ಹರಿದಾಸರು, ಭದ್ರಾಚಲ ರಾಮದಾಸರು ಭದ್ರಾದ್ರಿ ರಾಮನನ್ನೇ ಸಂಪೂರ್ಣವಾಗಿ ನಂಬಿದವರು. ಈ ಮಹಿಮಾನ್ವಿತರು ಭಕ್ತಿಯ ಮಹಿಮೆಯನ್ನೇ ಪ್ರಮುಖವಾಗಿ ತಮ್ಮ ಕೀರ್ತನೆಗಳಲ್ಲಿ ಪ್ರಚುರಪಡಿಸಿದ್ದರೂ, ಈರ್ವರ ಅಗಾಧ ಪಾಂಡಿತ್ಯವೂ ಕೆಲವು ರಚನೆಗಳಲ್ಲಿ ಹೊರಬರುವುದುಂಟು. ಇವನ್ನು ನಾವು ಕೆಲವು ರಚನೆಗಳಲ್ಲಿ ವಿಶೇಷವಾಗಿ ಕಾಣುತ್ತೇವೆ. ಇಬ್ಬರೂ ಉದ್ದಾಮ ಪಂಡಿತರೂ, ಶಾಸ್ತ್ರಕೋವಿದರೂ, ಸಂಗೀತಜ್ಞರೂ ಆಗಿದ್ದರೆಂಬುದರಲ್ಲಿ ಅನುಮಾನವಿಲ್ಲ. ಈರ್ವರೂ ರಚಿಸಿರುವ ಕೆಲವು ಸಂಕೀರ್ಣ ರಚನೆಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗುತ್ತದೆ.*

**ಪ್ರಮುಖ ಪದಗಳು:** *ಪುರಂದರದಾಸರು, ಭದ್ರಾಚಲ ರಾಮದಾಸರು, ಶತಕ, ದಂಡಕ.*

## 1. ಪೀಠಿಕೆ

ಕರ್ನಾಟಕದಲ್ಲಿ ೧೫ನೇ ಶತಮಾನದಲ್ಲಿ ಶ್ರೀಪಾದರಾಜರಾದಿಯಾಗಿ ಬಂದ ಹರಿದಾಸರೆಲ್ಲರೂ ಕನ್ನಡ ಸಾಹಿತ್ಯವನ್ನು ತಮ್ಮ ರಚನೆಗಳ ಮೂಲಕ ಶ್ರೀಮಂತಗೊಳಿಸಿ ವಿವಿಧ ಪ್ರಾಂತಗಳ ಭಕ್ತಕವಿಗಳಿಗೆ ಸ್ಫೂರ್ತಿಯಾದರು. ಹರಿದಾಸರಲ್ಲಿ ಅಗ್ರಪಂಕ್ತಿಯಲ್ಲಿರುವ ಪುರಂದರದಾಸರಂತೂ ತಮ್ಮ ಸಾಹಿತ್ಯ-ಸಂಗೀತಗಳ ಕೌಶಲದಿಂದ ಲಕ್ಷ್ಯ-ಲಕ್ಷಣ ಪ್ರವೀಣರೆನಿಸಿ ಮುಕ್ತಿಪಥವನ್ನು ಸಮಾಜಕ್ಕೆ ತೆರೆದಿಟ್ಟರು. ದೇಸೀ ಪದಲಾಲಿತ್ಯ, ಶಬ್ದಸಂಪತ್ತು, ಬೃಹತ್ತಾದುದನ್ನು ಕೆಲವು ಪದಗಳಲ್ಲಿ ಇಡಿಕಿರಿಸುವ ಪ್ರತಿಭೆ ಮುಂತಾದವು ಪುರಂದರದಾಸರಲ್ಲಿ ಅಗಾಧವಾಗಿರುವುದು ಕಂಡುಬರುತ್ತದೆ. ಇವರು ಹಲವಾರು ಬಗೆಯ ರಚನೆಗಳನ್ನು ಮಾಡಿದ್ದಾರೆ. ಉಗಾಭೋಗ, ಸುಳಾದಿ, ಗೀತೆ, ಠಾಯ, ಪದ್ಯ ಹಾಗೂ ಪದ ಎಂಬ ಷಡ್ವಿಧ ರಚನೆಗಳನ್ನು ಇವರಲ್ಲಿ ಕಾಣಬಹುದು.

ಹರಿದಾಸರ ಮಾರ್ಗವನ್ನು ಅನುಸರಿಸಿ ಹಲವಾರು ಪ್ರಾಂತ್ಯಗಳಲ್ಲಿ ಭಕ್ತಕವಿಗಳು ಅನುಪಮವಾದ ಸಾಹಿತ್ಯವನ್ನು ನೀಡಿದ್ದಾರೆ. ಅಂತಹವರಲ್ಲಿ ೧೭ನೇ ಶತಮಾನದ ಭದ್ರಾಚಲ ರಾಮದಾಸರೂ ಪ್ರಮುಖರು. “ಭದ್ರಾದ್ರಿ, ಭದ್ರಾಚಲ” ಇತ್ಯಾದಿ ಮುದ್ರೆಗಳಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಸುಮಾರು ನೂರೈವತ್ತಕ್ಕೂ ಹೆಚ್ಚು ರಚನೆಗಳು ಇರುವುದಾಗಿ ಊಹಿಸಲಾಗಿದೆ. ಇವರ ಮೂಲ ಹೆಸರು ಕಾಂಚೆರ್ಲ ಗೋಪಣ್ಣ. ವೃತ್ತಿಯಲ್ಲಿ ತಹಶೀಲ್ದಾರರಾಗಿದ್ದ ಇವರ ಮಾತಾಪಿತೃಗಳು ಕಾಮಾಂಬಾ ಹಾಗೂ ಲಿಂಗಣ್ಣ ಮಂತ್ರಿ. ಇವರ ರಚನೆಗಳಲ್ಲಿ ಕೀರ್ತನೆಗಳು, ಶತಕ, ಚೂರ್ಣಿಕೆ ಮುಂತಾದುವುಗಳನ್ನು ಕಾಣಬಹುದು.

## 2. ಪುರಂದರ ದಾಸರ ಸಂಕೀರ್ಣ ರಚನೆಗಳು

ಪುರಂದರ ದಾಸರ ಸಾಹಿತ್ಯದಲ್ಲಿ ಅನೇಕ ಬಗೆಯ ವಿಶಿಷ್ಟ ರಚನೆಗಳನ್ನು ಕಾಣಬಹುದು. ಪುರಾಣಪ್ರಸಿದ್ಧ ಪ್ರಸಂಗಗಳ ಮೇಲಿನ ರಚನೆಗಳು ಮನೋಹರವೂ ಗಂಭೀರವೂ ಆಗಿವೆ. ಅವುಗಳಲ್ಲಿ ಗಜೇಂದ್ರಮೋಕ್ಷವೂ ಒಂದು. ಹನ್ನೊಂದು ನುಡಿಗಳ ಷಟ್ಪದಿಯ ಮಾದರಿಯ ರಚನೆಯಿದು. ಪಲ್ಲವಿಯಲ್ಲಿ ನಾರಾಯಣಸ್ಮರಣೆ ಕಾಣಬರುತ್ತದೆ. “**ಪಾಂಡ್ಯದೇಶದೊಳು** ಇಂದ್ರದ್ಯುಮ್ನನೆಂಬ” ಎಂಬುದಾಗಿ ಮೊದಲ ನುಡಿಯು ಆರಂಭವಾಗುತ್ತದೆ.

**ನಾರಾಯಣಾಯ ನಮೋ ನಾಗೇಂದ್ರಶಯನಾಯ**
**ನಾರದಾದ್ಯಖಿಳ ಮುನಿನಮಿತ ಚರಣಾಂಭೋಜ**
**ಸಾರಿದರೆ ಪೊರೆವ ಕಂಸಾರಿ ರಕ್ಷಿಪುದಿಂದು ಕಾರುಣ್ಯದಿಂದ ಒಲಿದು ||ಪ||**

ಪುರಂದರದಾಸರ ದಂಡಕವೂ ಲಭ್ಯವಿದೆ. ದಂಡಕವೆನ್ನುವುದು ಗದ್ಯಶೈಲಿಯ ರಚನೆ. ಈ ದಂಡಕವು ಎಂಬತ್ತೊಂದು ನಾಮಾವಳಿಗಳಿಂದ ಕೂಡಿದ್ದು, **"ಅನಂತಕೋಟಿ ಬ್ರಹ್ಮಾಂಡನಾಯಕ"** ಎಂಬುದರಿಂದ ಆರಂಭವಾಗುತ್ತದೆ. ಒಂದು ಸಣ್ಣ ಭಾಗವನ್ನು ಇಲ್ಲಿ ನೀಡಲಾಗಿದೆ:

**ಅನಂತ ಕೋಟಿ ಬ್ರಹ್ಮಾಂಡ ನಾಯಕ**
**ರಮಾ ಬ್ರಹ್ಮರುದ್ರೇಂದ್ರಾದಿ ವಂದ್ಯ**
**ಭಕ್ತ ವತ್ಸಲ ಭವ ರೋಗ ವೈದ್ಯ**
**ಶರಣಾಗತ ವಜ್ರ ಪಂಜರ**
**ಅಪತ್ಬಾಂಧವ ಅನಾಥ ಬಂಧೋ**
**ಅನಿಮಿತ್ತ ಬಂಧೋ ಪತಿತ ಪಾವನ**
**ಮಹಾರೋಗ ನಿವಾರಣ**

ಪುರಂದರದಾಸರ ಕೇಶವನಾಮ ಪ್ರಬಂಧವು ಸಾಹಿತ್ಯಾತ್ಮಕವಾಗಿಯೂ ಬಹಳ ಸುಂದರವಾಗಿದೆ. ಪ್ರತಿಯೊಂದು ನಾಮಕ್ಕೂ ಅರ್ಥಪೂರ್ಣವಾದ ಪದ್ಯ ಜೊತೆಯಾಗಿದೆ. ಕೇಶವಾದಿ ಚತುರ್ವಿಂಶತಿ ನಾಮಗಳು ಎಂದೇ ಈ ನಾಮಗಳು ಪ್ರಸಿದ್ಧ. ಕೇಶವ, ನಾರಾಯಣ, ಮಾಧವ ಎಂದು ಆರಂಭವಾಗುವ ಈ ನಾಮಗಳು ಶ್ರೀಕೃಷ್ಣ ಎಂಬ ನಾಮದೊಂದಿಗೆ ಮುಕ್ತಾಯವಾಗುತ್ತವೆ. "**ಅಚ್ಯುತಾನಂತ ಗೋವಿಂದ ಹರಿ**" ಎಂದು ಈ ಪ್ರಬಂಧವು ಆರಂಭವಾಗುತ್ತದೆ. ಕೇಶವ ನಾಮದ ಭಾಗವನ್ನು ಇಲ್ಲಿ ನೀಡಲಾಗಿದೆ:

**ಕೇಶವ ಕೃಷ್ಣ ಮುಕುಂದ ಹರಿ**
**ವಾಸುದೇವ ಗುರು ಜಗದಾದಿವಂದ್ಯ**
**ಯಶೋದೆಯ ಸುಕೃತದ ಕಂದ ಸ್ವಾಮಿ**
**ಶೇಷಶಯನ ಭಕ್ತ ಹೃದಯಾನಂದ**

### 3. ಭದ್ರಾಚಲ ರಾಮದಾಸರ ಸಂಕೀರ್ಣ ರಚನೆಗಳು

ಭದ್ರಾಚಲ ರಾಮದಾಸರು ದಾಶರಥಿ ಶತಕದ ಮೂಲಕ ತಮ್ಮ ಬರಹಕೌಶಲವನ್ನು ತೋರಿದ್ದಾರೆ. ಉತ್ಪಲಮಾಲಾ, ಚಂಪಕಮಾಲಾ ವೃತ್ತಗಳಲ್ಲಿ ಈ ಶತಕವು ಮೂಡಿಬಂದಿರುವುದಾಗಿ ದಾಶರಥಿ ಶತಕವೇ ಹೇಳುತ್ತದೆ. ಪ್ರತೀ ಪದ್ಯದ ಅಂತ್ಯದಲ್ಲಿ "**ದಾಶರಥಿ ಕರುಣಾಪಯೋನಿಧಿ**" ಎಂಬ ಮುದ್ರೆಯಿದೆ. ಅಲ್ಲಲ್ಲಿ ಬರುವ ದ್ವಿತೀಯಾಕ್ಷರಪ್ರಾಸ ಮುಂತಾದವು ಮೆರಗನ್ನು ತಂದುಕೊಡುತ್ತವೆ. ಒಳ್ಳೆಯ ಶಬ್ದಾಲಂಕಾರದ ಬಳಕೆ ಶತಕದುದ್ದಕ್ಕೂ ಕಾಣಬರುತ್ತದೆ.

**ರಾಮವಿಶಾಲ ವಿಕ್ರಮ ಪರಾಜಿತ ಭಾರ್ಗವರಾಮ ಸದ್ಗುಣ**
**ಸ್ತೋಮ ಪರಾಂಗನಾವಿಮುಖ ಸುವ್ರತ ಕಾಮ ವಿನೀಲ ನೀರದ**
**ಶ್ಯಾಮ ಕಕುತ್ಸ್ಥವಂಶ ಕಲಶಾಂಬುಧಿಸೋಮ ಸುರಾರಿದೋರ್ಭಲೋ**
**ದ್ದಾಮ ವಿರಾಮ ಭದ್ರಗಿರಿ - ದಾಶರಥೀ ಕರುಣಾಪಯೋನಿಧಿ ||೨||**

ಈ ಶತಕದಲ್ಲಿ ರಾಮಸ್ತುತಿಯ ಜೊತೆಗೆ ಇನ್ನೂ ಅನೇಕ ಸಂಗತಿಗಳು ಅಡಕವಾಗಿವೆ. ದಶಾವತಾರವನ್ನೂ ಈ ಶತಕದಲ್ಲಿ ತಂದಿರುವುದು ವಿಶೇಷ. ಒಂದೊಂದು ಅವತಾರಕ್ಕೂ ಒಂದೊಂದು ಪದ್ಯವನ್ನು ಕಾಣಬಹುದು. ಉದಾಹರಣೆಗೆ ನೃಸಿಂಹನನ್ನು ಕುರಿತಾದ ಪದ್ಯ ಇಂತಿದೆ:

**ಪೆಟಪೆಟನುಕ್ಕು ಕಂಬಮುನ ಭೀಕರದಂತ ನಖಾಂತರ ಪ್ರಭಾ**
**ಪಟಲಮು ಗಪ್ಪ ನುಪ್ಪತಿಲಿ ಭಂಡನವೀಧಿ ನೃಸಿಂಹಭೀಕರ**
**ಸ್ಫುಟಪಟುಶಕ್ತಿ ಹೇಮಕಶಿಪು ವಿದಳಿಂಚಿ ಸುರಾರಿಪಟ್ಟಿ ನಂ**
**ತಟಗೃಪಜೂಚಿತೀವೆಕದ ದಾಶರಥೀ ಕರುಣಾಪಯೋನಿಧಿ || ೭೨ ||**

ರಾಮದಾಸರ ರಾಮಾಯಣದ ಚೂರ್ಣಿಕೆಯೂ ಸೊಗಸಾಗಿದೆ. ಇಡಿಯ ರಾಮಾಯಣದ ಕಥೆಯನ್ನು ಇದರಲ್ಲಿ ಹಿಡಿದಿಟ್ಟಿದ್ದಾರೆ. ವಿಶೇಷವಾಗಿ ಕೇಶವಾದಿ ಚತುರ್ವಿಂಶತಿ ನಾಮಗಳು ಇಲ್ಲಿಯೂ ಕಾಣಬರುತ್ತವೆ. ಪ್ರತೀ ಭಾಗದ ಅಂತ್ಯದಲ್ಲಿ ಈ ಕೇಶವಾದಿ ನಾಮಗಳ ಪೈಕಿ ಒಂದು ನಾಮವನ್ನು ಕಾಣಬಹುದು.

**ಕೌಸಲ್ಯಾದಶರಥ ಮನೋರಥಾಮಂದಾನಂದ ಕಂದಳಿತ**
**ಹೃದಯಾರವಿಂದ ನಿರೂಢ ಕ್ರೀಡಾ ಶೈಶವಂ ಶ್ರೀಕೇಶವಂ**

**4. ಸಮಾರೋಪ**

ಪುರಂದರದಾಸರು ಮತ್ತು ಭದ್ರಾಚಲ ರಾಮದಾಸರಿಬ್ಬರೂ ಭಕ್ತಿಶಿಖರದ ಔನ್ನತ್ಯಕ್ಕೆ ಏರಿದವರು. ಈರ್ವರೂ ತಮ್ಮದೇ ಆದ ಶೈಲಿಯನ್ನು ಹೊಂದಿದ್ದಾರೆ. ಭಕ್ತಿಪ್ರಧಾನವಾದ ಮನೋಜ್ಞವಾದ ಸಾಹಿತ್ಯವನ್ನು ಸೃಜಿಸಿರುವ ಈರ್ವರೂ ಕಾವ್ಯಕೋವಿದರೂ ಹೌದು. ಇವರ ಪ್ರತಿಭಾ ಶಕ್ತಿಯು ಇಂತಹ ಕೆಲವು ರಚನೆಗಳಲ್ಲಿ ಹರಳುಗಟ್ಟಿದೆ. ಭಕ್ತರಿಗೂ ಕಾವ್ಯಾಸಕ್ತರಿಗೂ ವೇದ್ಯವಾಗಿರುವಂತಹ ಈರ್ವರೂ ಭಾರತೀಯ ಸಂಸ್ಕೃತಿಯ ಸಾಕ್ಷಿಪ್ರಜ್ಞೆಗಳಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು :**

೧. ಶ್ರೀಪುರಂದರದಾಸರ ಸಾಹಿತ್ಯ – ಆರ್ತಭಾವ, ಬೆಟಗೇರಿ ಕೃಷ್ಣಶರ್ಮಾ ಮತ್ತು ಬೆಂಗೇರಿ ಹುಚ್ಚುರಾಯರು, ಶ್ರೀಪುರಂದರದಾಸರ ೪೦೦ ನೆಯ ವರ್ಷದ ಉತ್ಸವ ಮಂಡಲ, ಧಾರವಾಡ, ೧೯೬೪

೨. ಶ್ರೀಪುರಂದರದಾಸರ ಸಾಹಿತ್ಯ – ಮಾಹಾತ್ಮ್ಯಜ್ಞಾನ, ಬೆಟಗೇರಿ ಕೃಷ್ಣಶರ್ಮಾ ಮತ್ತು ಬೆಂಗೇರಿ ಹುಚ್ಚುರಾಯರು, ಶ್ರೀಪುರಂದರದಾಸರ ೪೦೦ ನೆಯ ವರ್ಷದ ಉತ್ಸವ ಮಂಡಲ, ಧಾರವಾಡ, ೧೯೬೪

೩. ಶ್ರೀಪುರಂದರದಾಸರ ಸಾಹಿತ್ಯ – ಸಂಕೀರ್ಣ ಸಂಗ್ರಹ, ಬೆಟಗೇರಿ ಕೃಷ್ಣಶರ್ಮಾ ಮತ್ತು ಬೆಂಗೇರಿ ಹುಚ್ಚುರಾಯರು, ಶ್ರೀಪುರಂದರದಾಸರ ೪೦೦ ನೆಯ ವರ್ಷದ ಉತ್ಸವ ಮಂಡಲ, ಧಾರವಾಡ, ೧೯೬೬

೪. ಪುರಂದರ ಸಾಹಿತ್ಯ ದರ್ಶನ ಸಂಪುಟ ೧-೪, ವಿದ್ಯಾಲಂಕಾರ ಪ್ರೊ. ಸಾ. ಕೃ. ರಾಮಚಂದ್ರ ರಾವ್, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

೫. Ramadasu, B Rajanikanta Rao, Sahitya Akademi, Delhi, 1988

೬. Dasarathi Satakam, Translated by Dr Pappu Venugopala Rao, Potti Sreeramulu Telugu University, Hyderabad, 1998